

ನಂದನದ ತುಣುಕೊಂದು ಕಳಚಿ ಇಳೆಗೆ ಬಿದ್ದಂತೆ ಕಾಣಿಸುವ ಕೇಪ್ ಟೌನ್‌ನ ವಿಹಂಗಮ ನೋಟ



ಕೇಪ್ ಟೌನ್‌ನ ನೆಲಮೂಲದ ಕಥನಗಳನ್ನು ಪಿಸುಗುಡುವಂತೆ ಕಾಣಿಸುವ ಸ್ಥಳೀಯ

ವಾಸ್ಕೋಡಿಗಾಮ ಭಾರತವನ್ನು ಹುಡುಕಿ ಅಲೆವಾಗ ಈ ನೆಲದ ಸಮುದ್ರ ತೀರದಲ್ಲಿ ಇಳಿದು ಅವನು ತಿರುಗಿ ಹೊರಟ ಮೇಲೆ ಡಚ್ಚರ ಆಗಮನವಾಗುತ್ತದೆ. ಅವರು ದುಡಿಮೆಗಾಗಿ ಇಲ್ಲಿನ ಜನರನ್ನು ತಮಗೆ ಬೇಕಾದ ಹಾಗೆ ಬಳಸಿಕೊಳ್ಳುತ್ತಾರೆ. ಇಲ್ಲಿನ ಮುಗ್ಧ ಜನರನ್ನು ಹಿಡಿದಿಟ್ಟು 'ಈಸ್ಟ್ ಇಂಡಿಯಾ ಕಂಪನಿ'ಗೆ ಮಾರಾಟ ಮಾಡುತ್ತಾ, ಇಲ್ಲವೇ ಬಿಡುವಿಲ್ಲದ ಕೆಲಸಗಳಿಗೆ ತೊಡಗಿಸುತ್ತಾರೆ. ಕುದುರೆ, ನಾಯಿ, ಆನೆಯನ್ನು ಪಳಗಿಸಿದವರಿಗೆ ಮನುಷ್ಯನನ್ನು ಪಳಗಿಸುವುದು ಕಷ್ಟದ ಕೆಲಸವಾಗಿರಲಿಲ್ಲ.

ಬಿಳಿಯರ ಅಟ್ಟಹಾಸದ ಕುರುಹುಗಳಿರುವ ಮ್ಯೂಸಿಯಂನಲ್ಲಿ ಮನುಷ್ಯನನ್ನು ಪ್ರಾಣಿಗಿಂತ ಕಡೆಯಾಗಿಸಿದ ದಾಖಲೆಗಳು ಹೇರಳವಾಗಿ ಸಿಗುತ್ತವೆ. ಇಂಡಿಯಾ ಸೇರಿದಂತೆ ಮೆಕ್ಸಿಕೊ ಹಾಗೂ ಇತರೆ ದೇಶದ ಮುಗ್ಧ ಜನರನ್ನು ತಂದು ಇಲ್ಲಿ ಕೂಡಿ, ಮಡಗಾಸ್ಕರ್‌ನಿಂದ ಭತ್ತ ಬೆಳೆದು ತರಲು, ಸೀಲ್, ಪೆಂಗ್ವಿನ್ ಇತರೆ ಪ್ರಾಣಿಗಳನ್ನು ಹಿಡಿಯಲು, ದ್ರಾಕ್ಷಿ ತೋಟದಲ್ಲಿ ದುಡಿಯುತ್ತ ವೈನ್ ಬಟ್ಟಲನ್ನು ಇವರ ಕೈಗಿಡುವವರೆಗೂ ಕೂಲಿಗಳಿಗೆ ಬರಿ ದುಡಿತವೇ ಹೊರತು ಹೊಟ್ಟೆ ತುಂಬುವ ಊಟವಿಲ್ಲ. ತಮ್ಮ ಬಟ್ಟೆಬರೆ ಮೈತೊಳೆಯಲು ಸಹ ಪುರುಸೊತ್ತು ಕೊಡದೆ ಅವರ ಮೇಲೆ ನಿರಂತರ ದುಡಿತದ ಹಿಡಿತ.

ಸೈರಣೆ ತೀರಿ ತಿರುಗಿ ಬಿದ್ದ ಆಳುಗಳಿಗೆ ತೊಡಿಸುತ್ತಿದ್ದ ಕಾಲಿನ ಕೋಳ, ಕೈಕಾಲು ಕಟ್ಟಿ ತರಲು ಬಳಸುತ್ತಿದ್ದ ಸೇದು ಹಗ್ಗಗಳು ಮ್ಯೂಸಿಯಂನಲ್ಲಿದ್ದು, ನೋಡುವವರ ಎದೆ ಹಿಂಡುತ್ತವೆ. ಆಳುವ ಮನುಷ್ಯನ ನೀಚತನಕ್ಕೆ ಪ್ರತಿಯಾಗಿ ಮತಿಭ್ರಮಣೆಗೆ ಒಳಗಾದ ಕೈಯಾಳುಗಳು ಬೆಂಕಿಹಚ್ಚಿ ಪ್ರತಿಭಟಿಸಿದ್ದೂ ಇದೆ. ಕಾಡುಪಾಲಾಗಿದ್ದೂ ಇದೆ. ಹಾಗೆಯೇ ಆತ್ಮಹತ್ಯೆ ಮಾಡಿಕೊಂಡಿದ್ದೂ ಇದೆಯೆಂಬುದನ್ನು ಇಲ್ಲಿನ ಚಿತ್ರಗಳು ಸಾರುತ್ತವೆ. ಇಲ್ಲಿ ಕಾಣುವ ಗುಂಡು, ತುಪಾಕಿ, ರೈಫಲ್ಲುಗಳು ಕೈಯಾಳುಗಳು ಎತ್ತಿದ ದನಿಯನ್ನು ಅಡಗಿಸಿದ್ದು ಸುಳ್ಳಲ್ಲ ಎಂದೂ ಹೇಳುತ್ತವೆ.

## ಕೂಲಿಗಳ ಮಾರುಕಟ್ಟೆ!

ಕೇಪ್ ಟೌನ್ – ಆಫ್ರಿಕಾ ಖಂಡದ ಭೂ ಪದತಲದಲ್ಲಿದ್ದು, ಸುತ್ತಲೂ ಆವೃತವಾದ ಹಿಂದೂ ಮಹಾಸಾಗರ, ಅಟ್ಲಾಂಟಿಕ್ ಸಾಗರದ ಜಲಸಂಪತ್ತು. ಅದಾಗಲೇ ಜಲಯಾನದ ಪರಿಣತಿಯಿಂದ ಗುಲಾಮರನ್ನು ಸಾಗಿಸುವ ಸುಲಭೋಪಾಯದ ದಾರಿಯನ್ನು ಬಿಳಿಯರೇ